ಈ) 'ಇ' ನಲ್ಲಿ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) – ,, –

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯಮಂತ್ರಿಗಳು ದೇವಾಲಯಗಳ ಸಂಖ್ಯೆಯನ್ನು ಕೊಟ್ಟಿದ್ದಾರೆ. ನಾನು ಇಲ್ಲ ಒಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ದೇವಾಲಯಗಳಲ್ಲಿ ಗಂಡುದೇವರ ದೇವಾಲಯಗಳ ಸಂಖ್ಯೆ ಎಷ್ಟು, ಹೆಣ್ಣುದೇವರ ದೇವಾಲಯಗಳ ಸಂಖ್ಯೆ ಎಷ್ಟು ? ಹೆಣ್ಣುದೇವರು ಅಂದರೆ ಮಾರಮ್ಮ, ಪುಸಣಿಮ್ಮ ಇತ್ಯಾದಿ ಇರುತ್ತವೆ, ಇಂತಹ ದೇವರುಗಳು ಎಷ್ಟು ? ಆ ದೇವರುಗಳ ಅರ್ಚಕರ ಸಂಖ್ಯೆ ಎಷ್ಟು ? ಅರ್ಚಕರುಗಳ ಸಂಖ್ಯೆಯಲ್ಲಿ ಯಾವ್ಯಾವ ಜಾತಿಗೆ ಸೇರಿದವರು ಇದ್ದಾರೆ ? ಷೆಡ್ಯುಲ್ ಕಾಸ್ಟ್, ಷೆಡ್ಯುಲ್ ಟ್ರೈಬ್ ಹಾಗೂ ಹಿಂದುಳಿದ ವರ್ಗಗಳವರ ಸಂಖ್ಯೆ ಎಷ್ಟು ? ೪೯೫ ಜನಗಳಿಗೆ ಹಕ್ಕುಪತ್ರ ಕೊಟ್ಟಿಲ್ಲವೆಂದು ಹೇಳಿದ್ದೀರಿ, ಅವರಿಗೆ ಯಾವಾಗ ಹಕ್ಕುಪತ್ರಗಳನ್ನು ಕೊಡುತ್ತೀರಿ ?

ಶ್ರೀ ಕೆ. ಅಮರನಾಥಶೆಟ್ಟಿ.—ಗಂಡುದೇವರು ಹಾಗೂ ಹೆಣ್ಣು ದೇವರುಗಳ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಅದೇರೀತಿ ಅರ್ಚಕರ ಜಾತಿಯ ಬಗ್ಗೆ ಕೇಳಿದ್ದಾರೆ ಅದಕ್ಕೂ ಸಹ ಬೇರೆ ಪ್ರಶ್ನೆ ಕೇಳಿದರೆ ಯಾವ್ಯಾವ ಜಾತಿಯವರು ಇದ್ದಾರೆಂದು ಉತ್ತರ ಕೊಡುತ್ತೇನೆ. ೪೯೫ ಜನರಿಗೆ ತಸ್ತೀಕ್ ಹಕ್ಕುಪತ್ರವನ್ನು ಮೂರ ತಿಂಗಳಿನಲ್ಲಿ ಕೊಡುತ್ತೇನೆಂದು ಮೊನ್ನೆ ಉತ್ತರ ಕೊಟ್ಟಿದ್ದೇನೆ, ಅದನ್ನು ಮೂರು ತಿಂಗಳೊಳಗೆ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಒಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಎರಡನೇ ಸಾರಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ವೆಂಟರಾಮಯ್ಯ.—ಒಂದೇ ಒಂದು ಪ್ರಶ್ನೆ ಕೇಳುತ್ತೇನೆ, ತಸ್ತೀಕ್ ಹಕ್ಕುಪತ್ರವನ್ನು ಮೂರು ತಿಂಗಳೊಳಗೆ ಕೊಡುತ್ತೇನೆಂದು ಹೇಳಿದ್ದೀರಿ. ಅದರಿಂದಲೇ ಪೂಜಾರಿಗಳಿಗೆ ಸಂಬಳ ಕೊಡುವುದು. ನಾನು ಸ್ಪಷ್ಟವಾಗಿ ಕೇಳುತ್ತೇನೆ. ೫೦ ಪೈಸೆ ಒಂದು ತಿಂಗಳಿಗೆ ಕೊಡುವ ಅರ್ಚಕರು ಇದ್ದಾರೆ. ಅವರ ಗತಿ ನಮಗೆ ಗೊತ್ತು. ದುರ್ದೈವದಿಂದ ಪಿಳ್ಳೆ ಜುಟ್ಟುಬಿಟ್ಟುಕೊಂಡು ಗಲಾಟೆ ಬಾರಿಸಿ ಕೊಂಡು ಇರುತ್ತಾರೆ. ಅವರಿಗೆ ತಿಂಗಳಿಗೆ ೫೦ ಪೈಸೆ ಏನು ಕೊಡುತ್ತೀರಿ, ಇದನ್ನು ನಂಬಿಕೊಂಡಂಥ ವರಿಗೆ ಮಿನಿಮಮ್ ವೇಜಸ್ ಕೊಡುವುದಕ್ಕೆ ಏನಾದರೂ ಕಾನೂನು ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜನ ಎಂ. ಖರ್ಗೆ—ಇವರಿಗೂ ಅದಕ್ಕೂ ಏನು ಸಂಬಂಧ ? ನಿಮ್ಮ ಐಡಿಯಾಲಜಿಗೆ ನಾಳೆ ನಿಮ್ಮನ್ನು ಜನ ಸಂಶಯದ ದೃಷ್ಟಿಯಿಂದ ನೋಡುತ್ತಾರೆ.

ಅಧ್ಯಕ್ಷರು.—ಶ್ರೀ ವೆಂಕಟರಾಮಯ್ಯನವರೇ, ನೀವು ಕುಳಿತುಕೊಳ್ಳಿ. ಕೋರ್ಟಿನಲ್ಲಿ ನೀವು ಹೇಗೆ ವಕೀಲಿ ಮಾಡುತ್ತೀರೋ ಗೊತ್ತಿಲ್ಲ. ಹೀಗೆ ಸಿಕ್ಕಾಪಟ್ಟೆ ಕ್ರಾಸ್‌ಎಕ್ಸಾಮಿನ್ ಮಾಡುತ್ತೀರೇನು ?

ಶ್ರೀ ಆರ್. ವೆಂಕಟರಾಮಯ್ಯ.—ಈ ಆಗಮ ಪಾಂಡಿತ್ಯ ಏನಿದೆ, ಪರಿಶಿಷ್ಟ ಜಾತಿ ಮತ್ತು ವರ್ಗದವರು ಇದನ್ನು ಕಲಿತು ಇವರನ್ನು ಈ ದೊಡ್ಡದೊಡ್ಡ ದೇವಸ್ಥಾನಗಳಿಗೆ ಫುಲ್‌ಅಪ್ ಮಾಡಿದರೆ ಈಗೇನು ಬಹಿಷ್ಕಾರ ಹಾಕಿದ್ದಾರಲ್ಲಾ, ಹರಿಜನರು ಅಲ್ಲಿ ಹೋಗಬಾರದು ಎಂದು. ಇದು ಹೋಗುವುದಿಲ್ಲವೇ ? ಇದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಕೆ. ಅಮರನಾಥಶೆಟ್ಟಿ.—ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜನತೆ ಯಾರು ಬೇಕಾದರೂ ಆಗಮ ಶಾಸ್ತ್ರದಲ್ಲಿ ಕಲಿಯುವುದಕ್ಕೆ ಅವಕಾಶ ಇದೆ. ಯಾರಿಗೂ ತಡೆ ಮಾಡಿಲ್ಲ. ಯಾರು ಬೇಕಾದರೂ ಕಲಿತು ಬರಬಹುದು.

ಕುಂದಗೋಳ್ ತಾಲ್ಲೂಕಿನಲ್ಲಿ ಅಂಗನವಾಡಿಗಳನ್ನು ತೆರೆಯುವ ಬಗ್ಗೆ

೯೦೨ (೨೬೦೦) ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದಗೋಳ್ ತಾಲ್ಲೂಕಿನಲ್ಲಿ ಅಂಗನವಾಡಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಸರ್ಕಾರವು ಆಂಗನವಾಡಿಗಳನ್ನು ತೆರೆಯಲು ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ಹೌದು.

ಆ) ಭಾರತ ಸರ್ಕಾರವೇ ಬಾಲವಿಕಾಸ ಯೋಜನೆಗಳನ್ನು ಮಂಜೂರು ಮಾಡಬೇಕಾಗಿರುವುದರಿಂದ ಕುಂದಗೋಳ ತಾಲ್ಲೂಕು ಸೇರಿದಂತೆ ಯೋಜನೆಗಳಿಲ್ಲದ ಎಲ್ಲ ತಾಲ್ಲೂಕುಗಳ ವಿವರಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರ ಮಂಜೂರು ಮಾಡಿದಾಗ ಕುಂದಗೋಳ ತಾಲ್ಲೂಕಿನಲ್ಲಿಯೂ ಆಂಗನವಾಡಿಗಳನ್ನು ತೆರೆಯಲಾಗುವುದು.

ಶ್ರೀ ಬಿ. ಎ. ಉಪ್ಪಿನ್.—ಬೇಗ ಮಂಜೂರಾತಿ ತರಿಸಿಕೊಂಡು ಇದನ್ನು ಪ್ರಾರಂಭಮಾಡಿ.

ಶ್ರೀ ಜಿ. ಬಸವಣ್ಣಪ್ಪ.—ಆಗಬಹುದು.

ಪಂಚಾಯಿತ ದಾವೆಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ನಿಯಮಾವಳಿಗಳು

೯೦೪ (ವಿಟಿಸಿ) ಶ್ರೀ ಎಂ. ಎಲ್. ಉಸ್ತಾದ್, (ಬಿಜಾಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಹಕಾರ ಇಲಾಖೆಯಲ್ಲಿ ಪಂಚಾಯತ್ ದಾವೆಗಳನ್ನು ಇತ್ಯರ್ಥಕ್ಕಾಗಿ ಮಧ್ಯಸ್ಥಗಾರರಿಗೆ ಪಹಿಸಲು ನಿಯಮಾವಳಿಗಳೇನಾದರೂ ಇವೆಯೇ ?

ಆ) ಹಾಗಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು?

ಇ) ಇಲ್ಲವಾದಲ್ಲಿ ನಿಯಮಾವಳಿಗಳನ್ನು ರೂಪಿಸಲು ಸರ್ಕಾರವು ಕ್ರಮ ಕೈ ಗೊಳ್ಳುವುದೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಹೌದು. ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೭೧ ಹಾಗೂ ಸಹಕಾರಿ ಸಂಘಗಳ ನಿಯಮ ೩೧(೩) ರನ್ವಯ ಮಧ್ಯಸ್ಥಗಾರರಿಗೆ ಪಂಚಾಯತ್ ದಾವೆಗಳನ್ನು ಇತ್ಯರ್ಥಕ್ಕಾಗಿ ಪಹಿಸಲಾಗುತ್ತಿದೆ.

ಆ) ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೭೧ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮ ೧೯೬೦ ನಿಯಮ ೩೧(೩)ರ ಉದ್ಧೃತ ಭಾಗವನ್ನು ಲಗತ್ತಿಸಿದೆ.

ಇ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

Extracts from Section 71 of the Karnataka Co-operative Societies Act, 1959 and rule 31(3) of KCS Rules, 1960.

71. Disposal of Disputes - (1) The Registrar may on receipt of the reference of a dispute under section 70.

a) decide the dispute himself, or

b) transfer it for disposal to any person who has been invested by the State Government with powers in that behalf of

c) refer it for disposal to one arbitrator appointed by the Registrar.

2) The Registrar may withdraw any reference transferred under clauses (b) of sub-sections (1) or referred under clause(c) of that sub-section and decide it himself.